ಗಳನ್ನು ಪಡೆಯಲಾಗುತ್ತಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆಯಲ್ಲಿ ಹೇಳಲಾಗಿರುವಂತೆ ಉಡುಪಿ ಜಿಲ್ಲೆಯಲ್ಲಿ–ತಹಶೀಲ್ದಾರರು ಮೂಲಿಹಕ್ಕಿನ ಜಮೀನಿಗೆ ಸಂಬಂಧಿಸಿದಂತೆ ಆದೇಶಗಳನ್ನು ನೀಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿಯಾಗಿರುವ ಜಮೀನಿಗೆ ಆದೇಶಗಳನ್ನು ನೀಡುತ್ತಿದ್ದಾರೆ. ಈಗಾಗಲೇ ಸರಕಾರವು ಸುತ್ತೋಲೆ ಸಂ: ಆರ್‌ಡಿ 56 ಎಲ್‌ಜಿಪಿ 2008 ದಿನಾಂಕ: 10.09.2008 ರಂತೆ ಭೂ ಪರಿವರ್ತನೆಗೆ ಈ ಹಿಂದೆ ಇದ್ದ ಏಕಗವಾಕ್ಷಿ ಪದ್ಧತಿಯನ್ನು ಕೈಬಿಟ್ಟು ನಿಯಮಾವಳಿಗಳನ್ನು ಸರಳೀಕರಣಗೊಳಿಸಿದೆ.

ಆ) ಸಾರ್ವಜನಿಕರಿಂದ ಈ ಬಗ್ಗೆ ಬಂದಿರುವ ಮನವಿಗಳು ಸರ್ಕಾರದ ಹಂತದಲ್ಲಿ ಉಳಿದಿರುವುದಿಲ್ಲ.

ಇ) ಸರ್ಕಾರದ ಪರಿಗಣನೆಯಲ್ಲಿದೆ.

325 ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ತಾಲ್ಲೂಕು ಗೊರೂರು ಗ್ರಾಮ ಹೇಮಾವತಿ ಜಲಾಶಯಕ್ಕೆ ಹೊಂದಿಕೊಂಡಂತಿದ್ದ ಭಾಗಶಃ ಗ್ರಾಮವನ್ನು ಸ್ವಾಧೀನಪಡಿಸಿಕೊಂಡು ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ?

ಆ) ಹಾಗಿದ್ದಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಗೊರೂರು ಗ್ರಾಮದ 180 ಮನೆಗಳು ಹೇಮಾವತಿ ಜಲಾಶಯದಿಂದ ಶೀತಪೀಡಿತವಾಗಿದ್ದು ದಿನಾಂಕ: 3/1/2001 ರಂದು ಪ್ರಾರಂಭಿಸಿದ್ದ ಭೂಸ್ವಾಧೀನ ಪ್ರಕ್ರಿಯೆ ಅಸಿಂಧುಗೊಂಡಿರುತ್ತದೆ.

ಈ 180 ಮನೆಗಳ ಹಾಗೂ ನಾಲಾ ಮಧ್ಯದಲ್ಲಿ ಉಳಿದ 110, ಮನೆಗಳ 2ನೇ ಹಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ಮೈಸೂರು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿನ ಉನ್ನತ ಮಟ್ಟದ ಸಮಿತಿಯು ಸ್ಥಳ ತನಿಖೆ ಕೈಗೊಂಡು ವರದಿ ನೀಡಿದ ನಂತರ ತೀರ್ಮಾನಿಸಲಾಗುವುದು.